**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 584/2024**

**ಚಾ.ಸಾಃ 11, ಫ್ರಾ.ಸಾಃ 4**

| | |
|---|---|
| ಸಾಕ್ಷಿದಾರನ ಹೆಸರು | ಕೃಷ್ಣ ಗೌಡ |
| ತಂದೆಯ ಹೆಸರು | ತಿಮ್ಮ ಗೌಡ |
| ವಯಸ್ಸು | 45 ವರ್ಷಗಳು |
| ಉದ್ಯೋಗ | ಜೆಸಿಬಿ ಮಾಲಿಕರು |
| ವಾಸ್ತವ್ಯ | ಮಂಕಿ, ಅನಂತವಾಡಿ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 13-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿದ್ದೇನೆ.

ದಿನಾಂಕ 18-09-2024 ರಂದು ನನ್ನ ಮಾಲಿಕತ್ವದ ಒಂದು ಜೆಸಿಬಿ ಹಾಗೂ ಟಿಪ್ಪರನ್ನು ಮಂಕಿಯ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿದ್ದ ಗಣೇಶ ಕಾಂಪ್ಲೆಕ್ಸ ಮುಂಭಾಗದಲ್ಲಿ ರಸ್ತೆ ಬದಿಗೆ ನಿಲ್ಲಿಸಿದ್ದೆ. ಮರುದಿನ ಬಂದು ನೋಡಿದಾಗ ಜೆಸಿಬಿ ಮತ್ತು ಟಿಪ್ಪರನಲ್ಲಿದ್ದ ಬ್ಯಾಟರಿಗಳು ಕಾಣೆಸಲಿಲ್ಲ. ಅದೇ ದಿನ ರಾತ್ರಿ ಸಮಯಕ್ಕೆ ಅದೇ ಕಾಂಪ್ಲೆಕ್ಸನ ಒಂದು ಅಂಗಡಿ ಕಳ್ಳತನ ಆಗಿತ್ತು. ಬ್ಯಾಟರಿ ಕಳ್ಳತನ ಆಗಿದ್ದ ವಿಚಾರವನ್ನು ಪೋಲೀಸರಿಗೆ ತಿಳಿಸಿದ್ದೆ. ಅಂಗಡಿ ಮಾಲಿಕರು ದೂರು ನೀಡಿದ್ದರಿಂದ ನಾನು ಪ್ರತ್ಯೇಕ ದೂರು ನೀಡಲಿಲ್ಲ.

ದಿನಾಂಕ 20-09-2024 ರಂದು ಬೆಳಿಗ್ಗೆ 11-00 ಗಂಟೆಗೆ ಪೋಲೀಸರು ಫೋನ್ ಮಾಡಿ ನಿಮ್ಮ ಬ್ಯಾಟರಿ ಕಳ್ಳತನ ಮಾಡಿದವರು ಸಿಕ್ಕಿದ್ದಾರೆ ಠಾಣೆಗೆ ಬನ್ನಿ ಎಂದು ಕರೆದರು. ಅದರಂತೆ 11-10 ರ ಸಮಯಕ್ಕೆ ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ಠಾಣೆಗೆ ಹೋದಾಗ ಪೋಲೀಸ್ ಠಾಣೆಯಲ್ಲಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ಇದ್ದರು ಮತ್ತು ಠಾಣಾ ಆವರಣದಲ್ಲಿ ಒಂದು ಕಾರು ಇತ್ತು. ನಂತರ ಪೋಲೀಸರು ಸದರಿ ಬ್ಯಾಟರಿಗಳು ಕಾರಿನಲ್ಲಿ ಇರುವುದಾಗಿ ಹೇಳಿರುತ್ತಾರೆ. ನಂತರ ಪೋಲೀಸರು ಕಾರಿನಲ್ಲಿದ್ದ ನನ್ನ ಬ್ಯಾಟರಿಗಳನ್ನು ತೆಗೆದು ತೋರಿಸಿರುತ್ತಾರೆ. ನಾನು ಅವುಗಳನ್ನು ಗುರುತಿಸಿರುತ್ತೇನೆ. ಸದರಿ ಬ್ಯಾಟರಿಗಳನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-4 ರ ಫೋಟೋದಲ್ಲಿರುವ ಬ್ಯಾಟರಿಗಳನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಪೋಲೀಸರು ಆರೋಪಿತರನ್ನು ಗಣೇಶ ಕಾಂಪ್ಲೆಕ್ಸ ಹತ್ತಿರ ಕರೆದುಕೊಂಡು ಹೋದರು. ಮತ್ತು ನನ್ನನ್ನೂ ಸಹ ಅಲ್ಲಿಗೆ ಬರುವಂತೆ ಹೇಳಿದರು. ಅದರಂತೆ ನಾನು ಅಲ್ಲಿಗೆ ಹೋಗಿರುತ್ತೇನೆ. ಅಲ್ಲಿ ಆರೋಪಿತರು ಅಂಗಡಿಯ ಡೋರು ಮುರಿದ ಸ್ಥಳವನ್ನು ಮತ್ತು ಜೆಸಿಬಿ ಹಾಗೂ ಟಿಪ್ಪರ್ ಬ್ಯಾಟರಿ ಬಿಚ್ಚಿರುವ ಸ್ಥಳವನ್ನು ತೋರಿಸಿರುತ್ತಾರೆ. ನಂತರ ನಾನು ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ನನ್ನ ಬ್ಯಾಟರಿಗಳನ್ನು ನನ್ನ ಸ್ವಾದೀನಕ್ಕೆ ಪಡೆದುಕೊಂಡಿರುತ್ತೇನೆ. ನನ್ನ ಜೆಸಿಬಿ ಮತ್ತು ಟಿಪ್ಪರ್ ನೋಡಿದರೆ

ಗುರುತಿಸುತ್ತೇನೆ. ನಿಪಿ-6 ರಲ್ಲಿರುವ ಫೋಟೋದಲ್ಲಿರುವ ಜೆಸಿಬಿ ಮತ್ತು ಟಿಪ್ಪರನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ</u>**

ಬ್ಯಾಟರಿ ಕಳ್ಳತನ ಆದ ನಂತರ ನನ್ನ ಜೆಸಿಬಿ ಮತ್ತು ಟಿಪ್ಪರಗೆ ಬೇರೆ ಬ್ಯಾಟರಿಗಳನ್ನು ಹಾಕಿ ಪೋಲೀಸರಿಗೆ ಮಾಹಿತಿ ತಿಳಿಸಿ ಅವುಗಳನ್ನು ಬಳಸಿರುತ್ತೇನೆ. ಕಾಂಪ್ಲೆಕ್ಸ ಮುಂಭಾಗದಲ್ಲಿ ಸಿಸಿ ಕ್ಯಾಮರಾ ಇದ್ದು ಫುಟೇಜನ್ನು ಪೋಲಿಸರು ತೆಗೆದುಕೊಂಡಿದ್ದಾರೆ. ಆದರೆ ಆರೋಪಿತರು ಕರೆಂಟ್ ಶಾರ್ಟ ಸರ್ಕ್ಯುಟ್ ಆಗುವಂತೆ ಮಾಡಿ ಸಿಸಿಕ್ಯಾಮರಾ ಫುಟೇಜನ್ನು ನಾಶ ಪಡಿಸಿರುತ್ತಾರೆ. ನಾನು ಹೋಟೆಲನಲ್ಲಿರುವ ಸಿಸಿ ಕ್ಯಾಮರಾ ಫುಟೇಜನ್ನು ನೋಡಲಿಲ್ಲ ಮತ್ತು ನೋಡುವ ಪ್ರಯತ್ನ ಮಾಡಲಿಲ್ಲ. ನಾನು ಪೋಲೀಸ್ ಠಾಣೆಗೆ ಹೋದಾಗ ಆರೋಪಿತರು ಇಬ್ಬರು ಇದ್ದರು ಬೇರೆ ಯಾರೂ ಇರಲಿಲ್ಲ. ಬ್ಯಾಟರಿಗಳು ಕಾರಿನಲ್ಲಿ ಇದ್ದವು. ಕಾರಿನಲ್ಲಿದ್ದ ಬ್ಯಾಟರಿಯನ್ನು ಪೋಲೀಸರು ನನಗೆ ತೋರಿಸಿದ್ದು ನಾನು ಅದನ್ನು ಗುರುತಿಸಿರುತ್ತೇನೆ. ನಾನು ಬ್ಯಾಟರಿ ಖರೀದಿಸಿದ ಬಿಲ್ಲುಗಳನ್ನು ಪೋಲೀಸರಿಗೆ ಕೊಟ್ಟಿದ್ದು ಪೋಲೀಸರು ಬ್ಯಾಟರಿಯ ನಂಬರುಗಳನ್ನು ಪರಿಶೀಲಿಸಿರುತ್ತಾರೆ. ಸದರಿ ಬಿಲ್ಲುಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಬ್ಯಾಟರಿಗಳು ಎಕ್ಸೈಡ್ ಕಂಪನಿಯ ಕೆಂಪು ಬಣ್ಣದ ಬ್ಯಾಟರಿಗಳು. ಕಾರಿನೊಳಗಿದ್ದ ಬ್ಯಾಟರಿಗಳನ್ನು ತೋರಿಸಿದರು, ನನ್ನ ಮುಂದೆ ಆಚೆ ತೆಗೆಯಲಿಲ್ಲ. ಬ್ಯಾಟರಿಯ ಜೊತೆಯಲ್ಲಿ ಮುಮಾ-1 ರ ರಾಡ್ ಇತ್ತು. ನಾನು ಪೋಲೀಸ್ ಠಾಣೆಗೆ ಹೋಗಿ ಸುಮಾರು 15 ನಿಮಿಷ ಇದ್ದೆ. ನಂತರ ಸುಮಾರು 12-00 ಗಂಟೆಗೆ ಗಣೇಶ ಕಾಂಪ್ಲೆಕ್ಸ ಹತ್ತಿರ ಬಂದಿರುತ್ತೇನೆ. ನನ್ನ ಸಮಕ್ಷಮ ಆರೋಪಿತರಿಗೂ ಪೋಲೀಸರಿಗೂ ಯಾವುದೇ ಮಾತುಕತೆ ಆಗಲಿಲ್ಲ. ಗಣೇಶ ಕಾಂಪ್ಲೆಕ್ಸ ಹತ್ತಿರವೂ ಸಹ ನನ್ನ ಸಮಕ್ಷಮ ಆರೋಪಿತರಿಗೂ ಪೋಲೀಸರಿಗೂ ಯಾವುದೇ ಮಾತುಕತೆ ಆಗಲಿಲ್ಲ. 19 ನೇ ತಾರೀಕು ನಾನು ಜೆಸಿಬಿ ಮತ್ತು ಟಿಪ್ಪರನ್ನು ಕೆಲಸಕ್ಕೆ ತೆಗೆದುಕೊಂಡು ಹೋಗಿದ್ದೆ, ಪೋಲೀಸರು ಅದನ್ನು ವಾಪಸ್ಸು ತಂದು ನಿಲ್ಲಿಸುವಂತೆ ಹೇಳಿದ್ದರು, ಅದರಂತೆ ನಾನು ಅದೇ ಜಾಗದಲ್ಲಿ ತಂದು ನಿಲ್ಲಿಸಿದ್ದೇನೆ. ನಾನು ಹೇಳಿರುವಂತೆ ನನ್ನ ಬ್ಯಾಟರಿ ಕಳ್ಳತನ ಆಗದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**